ಉದಯವಾಣಿ

# ಜೂ. 2: ಬಿಎಸ್‌ಕೆಬಿಎ ನೆರೂಲ್‌ನ ಆಶ್ರಯದಲ್ಲಿ 'ಬಿಲ್ಲ ಹಬ್ಬ' ತಾಳಮದ್ದಳೆ

ಮುಂಬಯಿ, ಮೇ 31: ಬಿಎಸ್‌ಕೆಬಿ ಅಸೋಸಿಯೇಶನ್ ಗೋಕುಲ ಇದರ ನೆರೂಲ್‌ನಲ್ಲಿರುವ ಹಿರಿಯ ನಾಗರಿಕರ ಆಶ್ರಯಧಾಮ ಆಶ್ರಯದಲ್ಲಿ ಕರ್ನಾಟಕ ಸಂಘ ಮಹಿಳಾ ಯಕ್ಷಗಾನ ಮಂಡಳಿ ಚೆನ್ನೈ ಇದರ ಪ್ರಸಿದ್ಧ ಮಹಿಳಾ ಯಕ್ಷಗಾನ ಕಲಾವಿದರು ಜೂ. 2 ರಂದು ಅಪರಾಹ್ನ 3.30 ರಿಂದ 'ಬಿಲ್ಲ ಹಬ್ಬ' ಎಂಬ ಯಕ್ಷಗಾನ ತಾಳಮದ್ದಳೆ ನಡೆಯಲಿದೆ.

ಹಿಮ್ಮೇಳದಲ್ಲಿ ಭಾಗವತಿಕೆಯಲ್ಲಿ ಬಿ. ಎಂ. ರವೀಂದ್ರ ರಾವ್, ಚೆಂಡೆವಾದಕರಾಗಿ ಅಪೂರ್ವಾ ಆರ್. ಸುರತ್ಕಲ್, ಮದ್ದಳೆಯಲ್ಲಿ ಅಮೋಘಾ ಆರ್. ಸುರತ್ಕಲ್ ಹಾಗೂ ಅರ್ಥಧಾರಿಗಳಾಗಿ ಬಿ. ಶಶಿಕಲಾ ರಾವ್, ಉಮಾ ರಾಜ, ಮಧುಮತಿ ರಾವ್, ಸೌಮ್ಯಾಕೃಷ್ಣ ಕರುಣಾ ಶಿವಕುಮಾರ್, ರಾಜಶ್ರೀ ಭಟ್ ಅವರು ಭಾಗವಹಿಸಲಿದ್ದಾರೆ. ಯಕ್ಷಗಾನ ಕಲಾ ಪ್ರೇಮಿಗಳು ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಬಿಎಸ್‌ಕೆಬಿಎ ಇದರ ಪದಾಧಿಕಾರಿಗಳು ಪ್ರಕಟನೆಯಲ್ಲಿ ತಿಳಿಸಿದ್ದಾರೆ.